# Annual Sports Meet 2018-19
## 23rd March 2019




ವ್ಯಕ್ತಿಯೊಬ್ಬ ತನ್ನ ದೈಹಿಕ ಕ್ಷಮತೆಯನ್ನು ಕಾಯ್ದುಕೊಳ್ಳಬೇಕಾದರೆ ಪ್ರತಿನಿತ್ಯ ದೈಹಿಕ ಕಸರತ್ತನ್ನು ಮಾಡುವ ಮೂಲಕ ತಮ್ಮ ದೇಹಾರೋಗ್ಯವನ್ನು ಕಾಪಾಡಿಕೊಳ್ಳಬಹುದೆಂದು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಅಭಿಪ್ರಾಯ ಪಟ್ಟರು.

ನಗರದ ಓವಲ್ ಮೈದಾನದಲ್ಲಿ ಇಂದು ಹಮ್ಮಿಕೊಂಡಿದ್ದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ 2018–19ನೇ ಸಾಲಿನ ವಾರ್ಷಿಕ ಕ್ರೀಡಾ ಕೂಟವನ್ನು ಉದ್ಘಾಟಿಸಿ ಅವರು ಮಾಡನಾಡುತ್ತಿದ್ದರು.

Sound Mind in a Sound Body (ಗಟ್ಟಿ ಮನಸ್ಸಿಗೆ ಗಟ್ಟಿ ದೇಹ) ಇರಬೇಕಾದರೆ ನಿಯಮಿತವಾದ ವ್ಯಾಯಾಮ, ದೈಹಿಕ ಕಸರತ್ತು ಅಗತ್ಯ. ಇದರಿಂದ ವ್ಯಕ್ತಿಗೆ ಮಾನಸಿಕ ಹಾಗೂ ದೈಹಿಕ ಸ್ವಸ್ಥತೆ, ಉಲ್ಲಾಸ, ಉತ್ಸಾಹ ದೊರೆಯಲು ಸಾಧ್ಯ. ಆದರೆ ಇಂದು ಯುವಜನರು ತಮ್ಮ ಅಮೂಲ್ಯವಾದ ಸಮಯವನ್ನು ಇತರೆ ನಿರುಪಯುಕ್ತವಾದ ಕ್ಷೇತ್ರಗಳಲ್ಲಿ ಗಮನ ಹರಿಸಿ ಕ್ರೀಡೆಗೆ ಗಮನ ಹರಿಸದಿರುವುದು ಅತ್ಯಂತ ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದ ಅವರು ಕ್ರೀಡೆಯಲ್ಲಿ ಸ್ಪರ್ಧಿಸುವುದು ಮುಖ್ಯವೇ ಹೊರತು ಗೆಲುವಲ್ಲ ಎಂದು ತಿಳಿಸಿದರು.

ಪ್ರೊ.ಆರ್.ಸಿದ್ದರಾಜು ಸ್ವಾಗತಿಸಿ, ಎಂ.ವಿ.ಪ್ರಸಾದ್ ನಿರೂಪಿಸಿದ ಕಾರ್ಯಕ್ರಮದಲ್ಲಿ, ಪ್ರೊ.ಹೆಚ್.ಜೆ.ಚಂದ್ರಶೇಖರ್, ಪ್ರೊ.ಎಸ್.ಅಶ್ವಿನಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರೊ.ಎನ್.ಮೋಹನ್ ಕುಮಾರ್ ವಂದಿಸಿದರೆ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದರು.


































ATHLETE














ವಿದ್ಯಾವರ್ಧಕ ಸಂಘ (ರಿ.) ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು























ವರ್ಧಕ ಸಂಘ (ರಿ.) ಮೈಸೂರು
ಕ ಪ್ರಥಮ ದರ್ಜೆ ಕಾಲೇಜು
ಅಯ್ಯರ್ ರಸ್ತೆ, ಮೈಸೂರು-570 001





